## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ನವೀನ್ ಕೆ.ಎಸ್. ಇವರ ಶೂನ್ಯ ವೇಳೆಯ ಪ್ರಶ್ನೆಗೆ ಸರ್ಕಾರದ ಉತ್ತರ

**ವಿಷಯ:**

ಬೆಂಗಳೂರು ವೈದ್ಯಕೀಯ ಆಸ್ಪತ್ರೆಯ ಮುಂಭಾಗವೇ ತೆರೆದ ಒಳಚರಂಡಿ, ರಸ್ತೆಯಲ್ಲಿಯೇ ಮಣ್ಣಿನ ರಾಶಿ, ಅಲ್ಲಲ್ಲಿ ಬಿದ್ದಿರುವ ಬೃಹತ್ ಕೊಳವೆಗಳು, ರಸ್ತೆ ಮಧ್ಯೆಯೇ ಬ್ಯಾರಿಕೇಡ್ ಅಳವಡಿಕೆಯಿಂದ ಹಾಗೂ ರಸ್ತೆಗಳು ಸಂಪೂರ್ಣ ಹಾಳಾಗಿರುವುದರಿಂದ ವಾಹನಗಳು ಆಮೆ ವೇಗದಲ್ಲಿ ಸಂಚರಿಸಿ ದೂಳಿನಿಂದ ರಕ್ಷಿಸಿಕೊಳ್ಳಲು ಮುಖಗವಸು ಧರಿಸುವ ವ್ಯಾಪಾರಿಗಳು.

ಇದು ನಗರದ ಹೃದಯ ಭಾಗದಲ್ಲಿರುವ ಜೆ.ಸಿ. ರಸ್ತೆಯ ಚಿತ್ರಣ. ಈ ರಸ್ತೆಯಲ್ಲಿ ನಾಲಾ ಜಂಕ್ಷನ್‌ನಿಂದ ಪುರಭವನ ಜಂಕ್ಷನ್‌ವರೆಗೆ ವೈಟ್‌ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದೆ. ಕಳೆದ ನವೆಂಬರ್‌ನಿಂದ ಪ್ರಾರಂಭವಾದ ಈ ಕಾಮಗಾರಿ ಕುಂಟುತ್ತಾ ಸಾಗುತ್ತಿದ್ದು, ಸದ್ಯ ಒಳಚರಂಡಿ ಕೊಳವೆ ಹಾಗೂ 'ಆಪ್ಟಿಕಲ್ ಫೈಬರ್ ಕೇಬಲ್' (ಓಎಫ್‌ಸಿ) ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಒಳಚರಂಡಿ ಕೊಳವೆ ಅಳವಡಿಕೆ ಸಂಬಂಧ ರಸ್ತೆಯ ಕೆಲವೆಡೆ ಅಗೆದು ಹಾಗೆಯೇ ಬಿಡಲಾಗಿದೆ. ಈ ರಸ್ತೆಯಲ್ಲಿ ಭಾಗಶಃ ಸಂಚಾರ ನಿರ್ಬಂಧ ವಿಧಿಸಿರುವುದರಿಂದ ದಿನದಿಂದ ದಿನಕ್ಕೆ ವಾಹನ ದಟ್ಟಣೆ ಹೆಚ್ಚುತ್ತಲೇ ಇದೆ. ಇನ್ನೊಂದೆಡೆ ಮಣ್ಣು ನಡು ರಸ್ತೆವರಗೂ ವ್ಯಾಪಿಸಿ ಕೊಂಡಿರುವುದರಿಂದ ಇಲ್ಲಿ ಸಂಚರಿಸುವವರಿಗೆ ದೂಳಿನ ಮಜ್ಜನವಾಗಿದೆ ಹಾಗೂ ಒಳಚರಂಡಿ ಕೊಳವೆ ಹಾಗೂ 'ಆಪ್ಟಿಕಲ್ ಫೈಬರ್ ಕೇಬಲ್' (ಓಎಫ್‌ಸಿ) ಅಳವಡಿಕೆ ಕಾಮಗಾರಿಯಿಂದಾಗಿ ಪಾದಚಾರಿ ಮಾರ್ಗ ಕಣ್ಮರೆಯಾಗಿದೆ. ಅಗೆದ ಮಣ್ಣನ್ನು ಪಾದಚಾರಿ ಮಾರ್ಗದಲ್ಲಿಯೇ ಹಾಕಲಾಗಿದೆ. ಕೆಲ ಕೊಳವೆಗಳನ್ನು ಇರಿಸಲಾಗಿದೆ. ರಸ್ತೆಯಲ್ಲಿ ವಾಹನ ದಟ್ಟಣೆ ಇರುವುದರಿಂದ ಪಾದಚಾರಿಗಳು ಮಣ್ಣಿನ ರಾಶಿಯ ನಡುವೆಯೇ ಸಾಹಸ ಮಾಡಿ, ಸಾಗಬೇಕಾಗಿದೆ. ಇದರಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ದರು ಸಮಸ್ಯೆ ಎದುರಿಸುತ್ತಿದ್ದಾರೆ.

'ಪಾದಚಾರಿ ಮಾರ್ಗದಲ್ಲಿ ಮಣ್ಣನ್ನು ಹಾಕಿರುವುದರಿಂದ ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆತರುವುದು ಕಷ್ಟಸಾಧ್ಯವಾಗಿದೆ. ವಾಹನಗಳು ವೇಗವಾಗಿ ಬರುವುದರಿಂದ ರಸ್ತೆಯಲ್ಲಿಯೂ ಹೋಗಲು ಸಾಧ್ಯವಿಲ್ಲ. ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದೇವೆ' ಎಂದು ಸ್ಥಳೀಯ ನಿವಾಸಿ ಆನಂದವಲ್ಲಿ ತಿಳಿಸಿದರು. ಚಾಮರಾಜಪೇಟೆ, ಬಸವನಗುಡಿ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ತಲುಪುತ್ತಾರೆ. ಅದೇ ರೀತಿ, ಜೆ.ಪಿ.ನಗರ, ಜಯನಗರ, ವಿವಿ ಪುರ ಭಾಗದಿಂದ ಬರುವವರು ಡಯಾಗನಲ್ ರಸ್ತೆ ಹಾಗೂ ಆರ್.ವಿ. ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ಸೇರುತ್ತಾರೆ. ಎಚ್.ಸಿ. ಜವರಾಯ ವೃತ್ತದ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಜೆ.ಸಿ. ರಸ್ತೆ ತಲುಪುತ್ತಾರೆ. ಇದರಿಂದ ನಾಲ್ಕು ರಸ್ತೆಗಳಲ್ಲಿ ಬರುವ ವಾಹನಗಳು ಒಂದೇ ರಸ್ತೆಯನ್ನು ಸೇರಲಿವೆ. ಸಹಜವಾಗಿ ದಟ್ಟಣೆಯಿಂದ ಕೂಡಿರುತ್ತಿದ್ದ ಈ ರಸ್ತೆಯಲ್ಲಿ ಈಗ ವಾಹನ ಸಂಚಾರ ಪರಿಣಮಿಸಿದೆ. ಆದ್ದರಿಂದ ವೈಟ್‌ಟಾಪಿಂಗ್ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಬೇಕೆಂದು ಕೋರಿರುವ ಬಗ್ಗೆ.

**ಉತ್ತರ:**

ಜೆ.ಸಿ ರಸ್ತೆಯಲ್ಲಿ ಸುಮಾರು ವರ್ಷಗಳಿಂದ ರಸ್ತೆಯ ಎರಡೂ ಬದಿಯ ಕೆಲವು ಭಾಗದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ಸೌಲಭ್ಯ ಹಾಗೂ ಪಾದಚಾರಿ ಮಾರ್ಗ ಇಲ್ಲದಿರುವುದರಿಂದ ಮಳೆ ನೀರು ರಸ್ತೆಯಲ್ಲಿಯೇ ಹರಿದು ಹಾಗೂ ನಿಂತು ರಸ್ತೆಯಲ್ಲಿ ಆಗಾಗ ಗುಂಡಿ ಬಿದ್ದು ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ದೂರುಗಳು ಬರುತ್ತಿದ್ದ ಕಾರಣ, ಮೂಲ ಸೌಲಭ್ಯಗಳಾದ ಒಳಚರಂಡಿ

ವ್ಯವಸ್ಥೆ, ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್ ಹಾಗೂ ಓಎಫ್‌ಸಿ ಕೇಬಲ್ ಕಂಪನಿಗಳು ಮುಂದಿನ ದಿನಗಳಲ್ಲಿ ರಸ್ತೆಯನ್ನು ಅಗೆಯುವುದನ್ನು ತಪ್ಪಿಸಲು NP3, HDPE ಪೈಪ್‌ಗಳನ್ನು ಅಳವಡಿಸಿಕೊಂಡು ಸದರಿ ರಸ್ತೆಯನ್ನು ವೈಟ್‌ಟಾಪಿಂಗ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ.

ಮುಂದುವರೆದು, ಸದರಿ ರಸ್ತೆಯಲ್ಲಿ ವಾಹನ ಸಂಚಾರ ದಟ್ಟವಾಗಿದ್ದು, ಜಂಟಿ ಪೊಲೀಸ್ ಆಯುಕ್ತರು (ಸಂಚಾರ), ಬೆಂಗಳೂರು ನಗರ ರವರ ಆದೇಶದಂತೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ರಸ್ತೆಯ ಬಲಭಾಗದಲ್ಲಿ ಮಾತ್ರ NP3, HDPE ಪೈಪ್‌ಗಳ ಅಳವಡಿಕೆ ಕಾಮಗಾರಿ ನಿರ್ವಹಿಸುತ್ತಿದ್ದು, ಉಳಿದ ರಸ್ತೆಯ ಭಾಗವನ್ನು ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಹಾಗೂ ಕಾಮಗಾರಿಯನ್ನು ಶೀಘ್ರವಾಗಿ ದಿನಾಂಕ: 30–07–2025 ರೊಳಗಾಗಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಓಡಾಡಲು ಅನುಕೂಲವಾಗುವಂತೆ ಕ್ರಮಕೈಗೊಳ್ಳಲಾಗುವುದು.

**ಸಂಖ್ಯೆ: ನಅಇ 168 ಎಂಎನ್‌ವೈ 2025 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ